# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 28-06-2023ರಂದು ಬುಧವಾರ ಬೆಳಗ್ಗೆ 11-30 ಗಂಟೆಗೆ ನಡೆಯಲಿರುವ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳು.

## ಪೂರ್ವಭಾವಿ ಕಾರ್ಯಸೂಚಿ

| ವಿಷಯ ಸಂಖ್ಯೆ | | ವಿಷಯ ಸಂಕ್ಷಿಪ್ತವಾಗಿ | ಪುಟ ಸಂಖ್ಯೆ ಮತ್ತು ಅಡಕ |
|---|---|---|---|
| I | | <u>ಹಿಂದಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.</u> | |
| | I.I | ದಿನಾಂಕ: 24-03-2023 ರಂದು ಜರುಗಿದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | I |
| II | | <u>ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು</u> | -- |
| | II.1 | **2023-24ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಿರುವುದನ್ನು ಅನುಸಮರ್ಥನೆಗೆ ಮಂಡಿಸುವ ಬಗ್ಗೆ** | 1 (ಅನುಬಂಧ- 'ಅ','ಆ') |
| | II.2 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠದ ಸ್ಥಾಪನೆಗೆ ಹಾಗೂ ಅದರ ಚಟುವಟಿಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿಷ್ಕೃತ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. | 2-3 (ಅಡಕ-'ಅ', 'ಆ', 'ಇ', 'ಈ' 'ಉ', 'ಊ'-1-5) |
| | II.3 | **Patent Commercialized** ಆಗಿರುವ ಸಂಬಂಧ ಬಿಡುಗಡೆಯಾಗಿರುವ **Royalty** ಮೊತ್ತವನ್ನು **Inventors** ರವರಿಗೆ ನೀಡುವ ಬಗ್ಗೆ. | 4 |
| | II.4 | **Board of Open Schooling & Skill Education, Sikkim ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ XII ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವ ಬಗ್ಗೆ.** | 5 (ಅನುಬಂಧ-'ಅ') |
| | II.5 | ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾಗಿರುವಂತಹ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ. | 6 (ಅನುಬಂಧ- 'ಅ, ಆ'.'ಇ') |
| | II.6 | "ಪ್ರೊ ಶೋಭಾ ಜಗನ್ನಾಥ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. | 7 |
| | II.7 | **2022-2023ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿಯ 3ನೇ ಸೆಮಿಸ್ಟರ್‌ನಲ್ಲಿ SEC ಪತ್ರಿಕೆಗಳಾದ India and Indian Constitution,Cutural, NSS ಪತ್ರಿಕೆಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.** | 8 ಅಧಿಸೂಚನೆ ಪ್ರತಿಗಳು-1-3 |
| | II.8 | **2022-2023ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಎರಡು ಪಟ್ಟು ಅವಧಿ ಮುಗಿದಂತಹ 05 ಬಿ.ಇಡಿ, ವಿದ್ಯಾರ್ಥಿಗಳಿಗೆ 03 ಮತ್ತು 04ನೇ ಸಮಿಸ್ಟರ್‌ಗೆ ಮರು ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡಿರುವ ಬಗ್ಗೆ,** | 9 ಅಡಕ-1-4 |

P.T.O →

| | | | |
|---|---|---|---|
| III | ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳು ಮಂಡಿಸಿದ ವಿಷಯಗಳು | | |
| | III | -- | -- |
| IV | ಶಿಕ್ಷಣ ಮಂಡಳಿ ಸದಸ್ಯರು ಮಂಡಿಸಿದ ನಿರ್ಣಯಗಳು | | |
| | IV | -- | -- |

ಸ್ಥಳ: ಮೈಸೂರು
ದಿನಾಂಕ::08–06–2023

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

<u>ವಿಷಯ ಸಂಖ್ಯೆ:–I</u>

ದಿನಾಂಕ: 24–03–2023 ರಂದು ಜರುಗಿದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.

Subject No. II. 1

2023-24ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ಭಾರತ್ ಇನ್ಸಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು. ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಿರುವುದನ್ನು ಅನುಸಮರ್ಥನೆಗೆ ಮಂಡಿಸುವ ಬಗ್ಗೆ.

*****

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2), ಬಹುಮಹಡಿ ಕಟ್ಟಡ, ಬೆಂಗಳೂರು ರವರು ಭಾರತ್ ಇನ್ಸಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ರಿಟ್ ಅರ್ಜಿ ಸಂಖ್ಯೆ: 18552/2022 ಹಾಗೂ 21767/2022 ಪ್ರಕಾರ ದಿನಾಂಕ: 16.09.2022 ಮತ್ತು 07.11.2022ರಲ್ಲಿ ದಾವೆ ಹೂಡಿ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇದರ ತೀರ್ಪಿನನ್ವಯ ಭಾರತ್ ಇನ್ಸಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿನ ಉನ್ನತ ಶಿಕ್ಷಣ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾನಿಲಯಗಳ ಅಧೀನದಲ್ಲಿ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಲು ನಿರ್ದೇಶನ ನೀಡಲಾಗಿರುತ್ತದೆ.

ಈ ಸಂಬಂಧ ದಿನಾಂಕ: 24.03.2023ರಂದು ಜರುಗಿದ ಶೈಕ್ಷಣಿಕ ಮಂಡಳಿಗೆ ವಿಷಯವನ್ನು ಮಂಡಿಸಿದ್ದು, ಸಭೆಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

" ಭಾರತ್ ಇನ್ಸ್‌ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು. ಇವರು Council of Board of School Education in India (COBSE) ಇವರಿಂದ ಮಾನ್ಯತೆ ಪಡೆದ ಬಳಿಕ ಷರತ್ತುಬದ್ಧ ಅನುಮತಿಯೊಂದಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿ ನೀಡಲು ತೀರ್ಮಾನಿಸಿರುತ್ತದೆ"

ತದನಂತರ, ಅಧ್ಯಕ್ಷರು, ಭಾರತ್ ಇನ್ಸಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು ರವರು ದಿನಾಂಕ 05.04.2023ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಮತ್ತೊಂದು ಮನವಿ ಪತ್ರ ಸಲ್ಲಿಸಿ UUCMS Portal ನಲ್ಲಿ 12th Equnivalent ಪಡೆದಿರುವ ಭಾರತ್ ಇನ್ಸಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯಲ್ಲಿನ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಮತ್ತು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯಲು ಅನುಮತಿ (ಅರ್ಹತೆ-Eligibility) ನೀಡಿದ್ದು, ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಸಹ ವ್ಯಾಪ್ತಿಗೆ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ಅವಕಾಶ ನೀಡಬೇಕೆಂದು ಕೋರಿರುತ್ತಾರೆ.(ಅನುಭಂಧ-ಅ)

ಈ ಹಿನ್ನಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ವಿ.ವಿ ಸುತ್ತೋಲೆ ಸಂಖ್ಯೆ:ಎಸಿ4/03/2017-18, ದಿನಾಂಕ: 23.05.2023ರಲ್ಲಿ ಸುತ್ತೋಲೆಯನ್ನು ಹೊರಡಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಬೇಕೆಂದು ಅನುಮತಿ ನೀಡಲಾಗಿದೆ.(ಪ್ರತಿ ಲಗತ್ತಿಸಿದೆ) (ಅನುಭಂಧ-ಆ)

1. ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ, ನವದೆಹಲಿ ಇವರು ವಿಧಿಸಿರುವ ಎಲ್ಲಾ ಷರತ್ತು/ ನಿಬಂಧನೆಗಳನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು,
2. ಶಿಕ್ಷಣ ಕಾಯ್ದೆಯಡಿಯಲ್ಲಿ ನಿಗಧಿಪಡಿಸಿರುವ ಎಲ್ಲಾ ಷರತ್ತು/ ನಿಬಂಧನೆಗಳನ್ನು ಪಾಲಿಸತಕ್ಕದ್ದು,
3. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಯಾವುದೇ ಆದೇಶವನ್ನು ಉಲ್ಲಂಘಿಸಿದಲ್ಲಿ ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುವುದು.

ಮೇಲಿನಂತೆ ವಿಶ್ವವಿದ್ಯಾನಿಲಯದಿಂದ ಕೈಗೊಂಡ ಕ್ರಮವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

(ಅನುಬಂಧ "6")

# BHARATH INSTITUTE OF SCHOOLING EDUCATION

Approved and Recognised by Government of Karnataka
An ISO 9001 - 2015 certified Organisation

Ref: BISE/10+2 Eligibility/UUCMS-Portal 12th Equivalent / Mys-Uni-10(1)/2022-23, Date: 05/04/2023

**ಗೌರವಾನ್ವಿತ:**
**ಕುಲಪತಿಗಳು,**
ಮೈಸೂರು ವಿಶ್ವವಿದ್ಯಾಲಯ,,
ಮಾನಸಗಂಗೋತ್ರಿ, ಮೈಸೂರು.

ಮಾನ್ಯರೆ,

**ವಿಷಯ :- UUCMS Portal ನಲ್ಲಿ 12th Equivalent ಪಡೆದಿರುವ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು. ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯಲ್ಲಿನ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅನುಮತಿ (ಅರ್ಹತೆ-Eligibility) ನೀಡಿರುವ ಕುರಿತು.**

**ಉಲ್ಲೇಖ:-** 1. ಸರ್ಕಾರಿ ಆದೇಶ ಸಂಖ್ಯೆ: ಇ-ಕ್ರಮಾಂಕ: ಇಡಿ/248/ಯು.ಆರ್.ಸಿ./ 2021, ಬೆಂಗಳೂರು, ದಿನಾಂಕ: 28.11.2022.

2. ಸರ್ಕಾರಿ ಆದೇಶ ಸಂಖ್ಯೆ: ಇ-ಕ್ರಮಾಂಕ: ಇಡಿ/248/ಯು.ಆರ್.ಸಿ./ 2021, ಬೆಂಗಳೂರು, ದಿನಾಂಕ: 25.11.2021.
3. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಸಂ. ಕರಾಉಶಿಪ/86/ಮುಕ್ತ ಶಾಲೆ/2021-2022/526, ದಿನಾಂಕ: 29.10.2021.
4. ಇತರೇ ಎಲ್ಲಾ ವಿಶ್ವವಿದ್ಯಾಲಯಗಳು ಪ್ರವೇಶಾತಿಗೆ ನೀಡಿರುವ ಅನುಮತಿ (Eligibility) ಸುತ್ತೋಲೆ ಪ್ರತಿಗಳು
5. Published in The Gazetteer of Karnataka Government, Dated: 05-03-2020; Volume No-155, Issue 10. (Phalguna 15, ShakaVarsha 1941)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ಸಂಸ್ಥೆಯು ಶಾಲೆ ಬಿಟ್ಟ ಮಕ್ಕಳಿಗೆ ಹಾಗೂ ನಾನಾ ಕಾರಣಗಳಿಂದ ಶಾಲೆಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದೇ ಇರುವ ಮಕ್ಕಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳು, ಮಹಿಳೆಯರು, ಗ್ರಾಮೀಣ ಯುವಕರು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು ಪ್ರೌಢ ಶಿಕ್ಷಣ. ಪದವಿ ಪೂರ್ವ ಶಿಕ್ಷಣ ಮತ್ತು ಕೌಶಲ್ಯ ತರಬೇತಿ ಶಿಕ್ಷಣ ಹಾಗೂ ಪದವಿ ಶಿಕ್ಷಣ ಪಡೆಯಲು ಅನುವು ಮಾಡಿಕೊಡುವ ಸಲುವಾಗಿ ಪುನಃ ಇವರನ್ನು ಶಿಕ್ಷಣದ ಮುಖ್ಯವಾಹಿನಿಗೆ ಕರೆತರುವ ಕೆಲಸವನ್ನು ಸಂಸ್ಥೆಯಿಂದ ಪ್ರಾರಂಭಿಸಿರುತ್ತೇವೆ. ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿ ಹೊಂದಿದ ನಂತರವು ಕೂಡ ಇನ್ನು ಹೆಚ್ಚಿನ ಸಂಖ್ಯೆಯ ಯುವಕರು, ಯುವತಿಯರು ಮತ್ತು ವಯಸ್ಕರು ಸಾಮಾಜಿಕ ಆರ್ಥಿಕ ಭೌಗೋಳಿಕ ಕಾರಣಗಳಿಂದ ಶಿಕ್ಷಣ ವಂಚಿತರಾಗಿದ್ದಾರೆ. ಇಂತಹ ಸಮಸ್ಯೆಗಳ ಪರಿಹಾರದ ಸಲುವಾಗಿ, ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) 52/2, ಶಾರದ ಆರ್ಕೇಡ್, ಮಾರುತಿ ಫಾರಂ, ದೊಂಬರಹಳ್ಳಿ, ಲಕ್ಷ್ಮೀಪುರ ಅಂಚೆ, ದಾಸನಪುರ ಹೋಬಳಿ, ಬೆಂಗಳೂರು-562162, ಸಂಸ್ಥೆಯು ಮುಕ್ತ ಶಾಲೆ ನಡೆಸಲಾಗುತ್ತಿದೆ. ಅದರಂತೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು ಮುಕ್ತ ಶಾಲೆಯಲ್ಲಿ ಪ್ರೌಢ ಮತ್ತು ಪದವಿ ಪೂರ್ವ (10+2) ತರಗತಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸಂಸ್ಥೆಯಿಂದ ಜಿಲ್ಲಾ ಮತ್ತು ತಾಲ್ಲೂಕುವಾರು ಕೇಂದ್ರಗಳನ್ನು ತೆರೆದು ಪ್ರವೇಶಾತಿಮಾಡಿ, ನಂತರ ಪಠ್ಯಪುಸ್ತಕಗಳನ್ನು & ಕಲಿಕಾ ಸಾಮಗ್ರಿಗಳನ್ನು ಡಿ.ಎಸ್.ಇ.ಆರ್.ಟಿ / ಎನ್.ಸಿ.ಇ.ಅರ್.ಟಿ, ಗಳಿಂದ ಪಡೆದು ವಿದ್ಯಾರ್ಥಿಗಳಿಗೆ ನೀಡಿ ಸಂಪರ್ಕ ತರಗತಿಗಳ ಮೂಲಕ ತರಬೇತಿ ಮಾಡುತ್ತಿದ್ದೇವೆ. ನಂತರ ಉತ್ತೀರ್ಣರಾದ 12ನೇ ತರಗತಿ ವಿದ್ಯಾಭ್ಯಾಸ ಮುಗಿಸಿ ಉನ್ನತ ವ್ಯಾಸಂಗ ಮಾಡಲು ಬಯಸಿ ಬರುವ ವಿದ್ಯಾರ್ಥಿಗಳನ್ನು ಪದವಿ ತರಗತಿ ಕಾಲೇಜುಗಳಲ್ಲಿ ಪ್ರವೇಶ

To Registrar 21/4/23

AC-9 22/4

+91 9513855009 | +91 9513585009
BISE, #52/2, Sharada Arcade, Maruthi Farm, Dombarahalli, Lakshmipura Post,
Dasanapura Hobli, Bengaluru - 562162.
www.bise.edu.in Email : info@bise.edu.in

ಮಾಡಿಕೊಳ್ಳಲು ತಮ್ಮ ಅಧೀನದಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿಗೆ ಅವಕಾಶ (ಅರ್ಹತೆಯನ್ನು-Eligibility) ವನ್ನು ನೀಡುವಂತೆ ಆದೇಶಿಸಲು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಕೋರಲಾಗಿತ್ತು.

ಅದರಂತೆ ಮೇಲಿನ ಉಲ್ಲೇಖ (3) ರಲ್ಲಿ **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್** ಇವರು "ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ರವರು ನಡೆಸುವ ಮುಕ್ತ ಶಾಲೆಯಲ್ಲಿ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿನ ಎಲ್ಲಾ ಪದವಿ ತರಗತಿಗಳಲ್ಲಿ ಪ್ರವೇಶ ಪಡೆಯಲು ಅನುಮತಿಸಬಹುದು. **ಇದು ಎನ್.ಇ.ಪಿ-2020 ರ ಸದುದ್ದೇಶಗಳಿಗೂ ಪೂರಕವಾಗಿದೆ (Flexibility)**". ಎಂದು ತಮ್ಮ ಸ್ಪಷ್ಟ ಅಭಿಪ್ರಾಯ/ ಶಿಫಾರಸ್ಸಿನೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ವರದಿ ಮಾಡಿರುತ್ತಾರೆ. (ಪ್ರತಿ ಲಗತ್ತಿಸಿದೆ)

**ಮಾನ್ಯ ಕೇಂದ್ರ ಸರ್ಕಾರವು N.E.P-2020 (NATIONAL EDUCATION POLICY-2020) ಯ CHAPTER-03 ಮತ್ತು CHAPTER-08 ರ ನಿಯಮದಂತೆ DROPOUT ಸಂಖ್ಯೆ ಕಡಿಮೆ ಮಾಡುವ ದೃಷ್ಟಿಯಿಂದ ಕನಿಷ್ಠ ಶಿಕ್ಷಣವನ್ನಾದರೂ ನೀಡಿ ವಿದ್ಯಾರ್ಥಿಗಳನ್ನು ಪುನ: ಶಿಕ್ಷಣದ ಮುಖ್ಯವಾಹಿನಿಗೆ ಕರೆತರುವ ಕೆಲಸವನ್ನು ಮಾಡಲು ಸೂಚಿಸಿರುತ್ತದೆ. ಹಾಗೆಯೇ ಶಾಲೆ/ ಕಾಲೇಜಿಗೆ ಹೋಗಲಾರದ ವಿದ್ಯಾರ್ಥಿಗಳು 10+2 ತರಗತಿಯಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಸಮಾಜಬಾಹಿರ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದನ್ನು ತಡೆಗಟ್ಟಲು ಮಾನ್ಯ ಕೇಂದ್ರ ಸರ್ಕಾರದ ಆದೇಶದಂತೆ N.E.P-2020 ಗೆ ಪೂರಕವಾಗಿ** ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು ಸಂಸ್ಥೆಯು ಈ ಉನ್ನತ ಕಾರ್ಯಕ್ರಮವನ್ನು **ಸರ್ಕಾರಿ ಆದೇಶ ಸಂಖ್ಯೆ: ಇ-ಕ್ರಮಾಂಕ: ಇಡಿ/248/ಯು.ಆರ್.ಸಿ./2021, ಬೆಂಗಳೂರು, ದಿನಾಂಕ: 25.11.2021. ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆದೇಶದಂತೆ ಕಾರ್ಯನಿರ್ವಹಿಸುತ್ತಿದೆ.**

ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ 12ನೇ ತರಗತಿ ವಿದ್ಯಾಭಾಸ ಮುಗಿಸಿ ಉನ್ನತ ವ್ಯಾಸಂಗ ಮಾಡಲು ಬಯಸಿ ಬರುವ ವಿದ್ಯಾರ್ಥಿಗಳನ್ನು ಪದವಿ ತರಗತಿ ಕಾಲೇಜುಗಳಲ್ಲಿ ಪ್ರವೇಶ ಮಾಡಿಕೊಳ್ಳಲು ತಮ್ಮ ಅಧೀನದಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿಗೆ ಅವಕಾಶ (ಅರ್ಹತೆಯನ್ನು-Eligibility) ವನ್ನು ನೀಡುವಂತೆ ಉಲ್ಲೇಖ (1)&(2)ರ ಸರ್ಕಾರಿ ಆದೇಶ ಸಂಖ್ಯೆ: ಇ-ಕ್ರಮಾಂಕ: ಇಡಿ/248/ ಯು.ಆರ್.ಸಿ./ 2021, ಬೆಂಗಳೂರು, ದಿನಾಂಕ: 25.11.2021. ಮತ್ತು ದಿನಾಂಕ : 28.11.2022 ರಲ್ಲಿ **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು** ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು. ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿನ ಉನ್ನತ ಶಿಕ್ಷಣ ವ್ಯಾಪ್ತಿಗೆ ಒಳಪಡುವ ಎಲ್ಲಾ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯಲು ಅನುಮತಿ ನೀಡಿರುತ್ತಾರೆ. ಈ ಸಂಬಂಧ ದಿನಾಂಕ: 28/11/2022 ರಂದು ತಮ ವಿಶ್ವವಿದ್ಯಾಲಯದ ಅಧಿಕೃತ E-Mail ID ಗೆ ಆದೇಶದ ಪ್ರತಿ ಕಳಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

**UUCMS Portal ನಲ್ಲಿ 12th Equivalent ಪಡೆದಿರುವ ಉಲ್ಲೇಖ (1)ರ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಉನ್ನತ ಶಿಕ್ಷಣ ಪಡೆಯುವಂತೆ ಅವಕಾಶ ಮಾಡಿಕೊಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಉಲ್ಲೇಖ (1)ರ ಸರ್ಕಾರಿ ಆದೇಶದಂತೆ ತಮ್ಮ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿಗೆ ಅನುಮತಿ (ಅರ್ಹತೆ-Eligibility) ನೀಡುವಂತೆ ಮತ್ತು ತಮ್ಮ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು ಸಂಸ್ಥೆಯ ಪ್ರವೇಶಾನುಮತಿಯನ್ನು ಪ್ರಕಟಿಸಬೇಕಾಗಿ ಹಾಗೂ ಸಂಬಂಧಿಸಿದ ಪದವಿ ಕಾಲೇಜುಗಳಿಗೆ ಮಾಹಿತಿ ನೀಡಬೇಕಾಗಿ ಕೋರುತ್ತೇವೆ.**

**ವಂದನೆಗಳೊಂದಿಗೆ,**

ತಮ್ಮ ನಂಬುಗೆಯ

Bengaluru

ವ್ಯವಸ್ಥಾಪಕ ನಿರ್ದೇಶಕರು

ವ್ಯವಸ್ಥಾಪಕ ನಿರ್ದೇಶಕರು
ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ)
ಬೆಂಗಳೂರು

**ಅಡಕ:** 1. ಉಲ್ಲೇಖದಲ್ಲಿನ ಸರ್ಕಾರಿ ಆದೇಶದ ಪ್ರತಿಗಳು-1, 2 & 3.
2. ಇತರೇ ವಿಶ್ವವಿದ್ಯಾಲಯಗಳು ಪ್ರವೇಶಾತಿಗೆ ನೀಡಿರುವ ಅನುಮತಿ (Eligibility) ಸಕತೋಳ ಪ್ರತಿಗಳು
3. ಇತರೇ ಪೂರಕ ದಾಖಲೆಗಳು.

(6 ನು ಶಂಭ - (8"))

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ:ಎಸಿ4/03/2017-18

ದಿನಾಂಕ: 23.05.2023

## ಸುತ್ತೋಲೆ

**ವಿಷಯ:-** ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡುವ ಬಗೆಗೆ.

**ಉಲ್ಲೇಖ:-**
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾನಿಲಯಗಳು-02) ಬಹುಮಹಡಿ ಕಟ್ಟಡ, ಬೆಂಗಳೂರು ರವರ ಪತ್ರ ಸಂಖ್ಯೆ: ಇಕ್ರಮಾಂಕ:ಇಡಿ/248/ಯುಆರ್‌ಸಿ/2021, ದಿನಾಂಕ: 28.11.2022
2. ಅಧ್ಯಕ್ಷರು, ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ಅವರ ಮನವಿ ಪತ್ರ ಸಂಖ್ಯೆ:BISE/10+2 Eligibility /UUCMS-O0rtal 12th Equivalent/ MYS-Uni-10(1)/2022-23, ದಿನಾಂಕ: 05.04.2023.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ:18.05.2023.

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ಈ ಸಂಸ್ಥೆ ನಡೆಸಲಾಗುವ ಮುಕ್ತ ಶಾಲೆಯಲ್ಲಿನ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಪದವಿ ಕಾಲೇಜುಗಳಿಗೆ ಪ್ರವೇಶಾತಿ ಪಡೆಯಲು ಉಲ್ಲೇಖ (1)ರ ಸರ್ಕಾರಿ ಪತ್ರದಲ್ಲಿ ತಿಳಿಸಿರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

1. ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ, ನವದೆಹಲಿ ಇವರು ವಿಧಿಸಿರುವ ಎಲ್ಲಾ ಷರತ್ತು/ ನಿಬಂಧನೆಗಳನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು,
2. ಶಿಕ್ಷಣ ಕಾಯ್ದೆಯಡಿಯಲ್ಲಿ ನಿಗಧಿಪಡಿಸಿರುವ ಎಲ್ಲಾ ಷರತ್ತು/ ನಿಬಂಧನೆಗಳನ್ನು ಪಾಲಿಸತಕ್ಕದ್ದು,
3. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಯಾವುದೇ ಆದೇಶವನ್ನು ಉಲ್ಲಂಘಿಸಿದಲ್ಲಿ ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುವುದು.

ಕುಲಸಚಿವ 24/5/2023

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

**ಇವರಿಗೆ:-**

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- **ಮಾಹಿತಿಗಾಗಿ**
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿಶ್ವವಿದ್ಯಾನಿಲಯ ಕಾನೂನು ಶಾಲೆ, ಮಾನಸಗಂಗೋತ್ರಿ, ಮೈಸೂರು.

ಪು.ತಿ.ನೋ

6. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ.ಮೈಸೂರು– ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ **ಕೋರಿದೆ.**
8. ಆಡಳಿತ/ಪರೀಕ್ಷಾ/ಶೈಕ್ಷಣಿಕ/ ವಿಭಾಗದ ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಅಧ್ಯಕರು, ಭಾರತ್ ಇನ್ಸ್‌ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ದೊಂಭರಹಳ್ಳಿ, ಲಕ್ಷ್ಮೀಪುರ ಅಂಚೆ, ದಾಸರಪುರ ಹೋಬಳಿ ಬೆಂಗಳೂರು–562162
11. ಆಡಳಿತ ಶಾಖೆ, ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳು ಇವರ ಆಪ್ತ ಸಹಾಯಕರುಗಳು, ಮೈವಿವಿ, ಮೈಸೂರು.
13. ಕಛೇರಿ ಪ್ರತಿ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠದ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿಷ್ಕೃತ ಕರಡು ಅಧಿನಿಯಮದ ಅನುಮೋದನೆ ಬಗ್ಗೆ.

*****

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠ ಸ್ಥಾಪನೆಗಾಗಿ 2016–17ನೇ ಸಾಲಿನಲ್ಲಿ ರೂ.1.00 ಕೋಟಿ (ಒಂದು ಕೋಟಿ ಮಾತ್ರ) ಅನುದಾನವನ್ನು ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಸಕಇ/528/ಪಕವಿ/2016, ಬೆಂಗಳೂರು, ದಿನಾಂಕ 19–11–2016 ರಲ್ಲಿ ಮಂಜೂರು ಮಾಡಲಾಗಿರುತ್ತದೆ(ಅಡಕ–'ಅ').

ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠ ಸ್ಥಾಪನೆಯ ಉದ್ದೇಶಿತ ಕಾರ್ಯಕ್ರಮವನ್ನು ನಡೆಸುವ ಸಂಬಂಧ ಕರಡು ಅಧಿನಿಯಮವನ್ನು ಸಿಂಡಿಕೇಟ್ ಸಭೆಯ, ಶೈಕ್ಷಣಿಕ ಮಂಡಳಿಯ ಸಭೆ ಮತ್ತು ಹಣಕಾಸು ಸಮಿತಿಯ ಅನುಮೋದನೆಯೊಂದಿಗೆ ದಿನಾಂಕ 23–12–2018ರಂದು ಸರ್ಕಾರಕ್ಕೆ ಕುಲಾಧಿಪತಿಗಳ ಅಂಕಿತ ದೊರೆಕಿಸಿಕೊಡಲು ರವಾನಿಸಲಾಗಿತ್ತು(ಅಡಕ–'ಆ'). ದಿನಾಂಕ 21–02–2019ರ ಸರ್ಕಾರದ ಪತ್ರದಲ್ಲಿ ಪೀಠಕ್ಕೆ ಸಂಬಂಧಪಟ್ಟ ಕೆಲವು ಮಾಹಿತಿಗಳನ್ನು ಒದಗಿಸುವಂತೆ ಹಾಗೂ ಪೀಠದ ಕರಡು ಅಧಿನಿಯಮವನ್ನು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ಮೂರು ಪ್ರತಿಗಳನ್ನು ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಕುಲಸಚಿವರ ಸಹಿಯೊಂದಿಗೆ ಕಳುಹಿಸಿಕೊಡುವಂತೆ ತಿಳಿಸಲಾಗಿರುತ್ತದೆ(ಅಡಕ 'ಇ').

ಮೇಲಿನ ಅಂಶವಾಗಿ ದಿನಾಂಕ 30–05–2020ರಂದು ಸರ್ಕಾರದ ನಿರ್ದೇಶನದನ್ವಯ ಪೀಠದ ಕರಡು ಅಧಿನಿಯಮಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಒದಗಿಸಲಾಗಿದ್ದು, ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 41(6) ರ ಪ್ರಕಾರ ಸಲ್ಲಿಸಲಾಗಿರುವ ಕರಡು ಅಧಿನಿಯಮಕ್ಕೆ ಸನ್ಮಾನ್ಯ ಕುಲಾಧಿಪತಿಯವರ ಅಂಕಿತ ದೊರಕಿಸಿಕೊಡಲು ಕೋರಲಾಗಿರುತ್ತದೆ. ದಿನಾಂಕ 16–07–2020ರ ಸರ್ಕಾರದ ಪತ್ರದಲ್ಲಿ ಪೀಠದ ಕ್ರಿಯಾ ಯೋಜನೆಯನ್ನು ಸಲ್ಲಿಸುವಂತೆ ತಿಳಿಸಿದ್ದ ಹಿನ್ನೆಲೆಯಲ್ಲಿ, ಅದರಂತೆ ದಿನಾಂಕ 11–09–2020ರಂದು ಪೀಠದ ಕ್ರಿಯಾ ಯೋಜನೆಯನ್ನು ಒದಗಿಸಲಾಗಿದೆ(ಅಡಕ–'ಈ').

..... 2

ಈ ಸಂಬಂಧ ಸರ್ಕಾರದ ಪತ್ರ ದಿನಾಂಕ 26–11–2020ರಲ್ಲಿ ಪೀಠದ ಪರಿನಿಯಮಗಳ ಲೋಪದೋಷಗಳನ್ನು ಸರಿಪಡಿಸಿಕೊಂಡು ಯುಜಿಸಿಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸಲ್ಲಿಸಿದ್ದಲ್ಲಿ ಸರ್ಕಾರವು ಪರಿಶೀಲಿಸಲಾಗುವುದೆಂದು ತಿಳಿಸಲಾಗಿರುತ್ತದೆ(ಅಡಕ–'ಉ').

ಅದರಂತೆ, ಮೇಲಿನ ಸರ್ಕಾರದ ಪತ್ರಗಳಲ್ಲಿ ನಿರ್ದೇಶಿಸಿರುವಂತೆ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠ ಸ್ಥಾಪನೆಗೆ ಸಂಬಂಧಿಸಿದ ಮಾಹಿತಿಗಳು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಚಿಸಿಕೊಂಡಿರುವ ಕರಡು ಅಧಿನಿಯಮ ಸಮಿತಿಯು ಹಲವು ಸಭೆಗಳಲ್ಲಿ ಚರ್ಚಿಸಿ ಅಂತಿಮವಾಗಿ ಕರಡು ಅಧಿನಿಯಮ ಪ್ರತಿಯನ್ನು ದಿನಾಂಕ 06–02–2023ರಂದು ಸಮಿತಿಯ ಅಧ್ಯಕ್ಷರು ನೀಡಿರುತ್ತಾರೆ, ಈ ರೀತಿಯಾಗಿ ನೀಡಲಾಗಿರುವ ಕರಡು ಪರಿಷ್ಕೃತ ಅಧಿನಿಯಮದ ಪ್ರತಿಯನ್ನು ಲಗತ್ತಿಸಲಾಗಿದೆ(ಅಡಕ–'ಊ').

ಈ ಹಿನ್ನೆಲೆಯಲ್ಲಿ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠದ ಉದ್ದೇಶಗಳಿಗಾಗಿ ಸರ್ಕಾರದ ನಿರ್ದೇಶನದಂತೆ ಸಿದ್ಧಪಡಿಸಿರುವ ಕರಡು ಪರಿಷ್ಕೃತ ಅಧಿನಿಯಮವನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ.

ಅನುಬಂಧ - ೮

No. 9221
Date 20/12/16



ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಬಿ.ಬಸವಲಿಂಗಪ್ಪ, ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಎನ್.ರಾಚಯ್ಯ ಮತ್ತು ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ ಪ್ರೊ|| ಬಿ.ಕೃಷ್ಣಪ್ಪನವರ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಕಾರ್ಪಸ್ ನಿಧಿ ನೀಡುವ ಬಗ್ಗೆ

ಓದಲಾಗಿದೆ:
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: ಪಜಾಉಯೋ-2/ಸಿಆರ್-130/2016-17, ದಿನಾಂಕ: 10-11-2016
5. ಸರ್ಕಾರದ ಆದೇಶ ಸಂಖ್ಯೆ: ಸಕಇ 310 ಎಸ್‌ಎಲ್‌ಪಿ 2016, ದಿನಾಂಕ: 19-08-2016

*****

ಪ್ರಸ್ತಾವನೆ:

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ: 10-11-2016 ರ ಏಕ ಕಡತದಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 15-07-2016 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಬಿ.ಬಸವಲಿಂಗಪ್ಪ, ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಎನ್.ರಾಚಯ್ಯ ಮತ್ತು ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ ಪ್ರೊ|| ಬಿ.ಕೃಷ್ಣಪ್ಪನವರ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ತಲಾ ರೂ.1.00 ಕೋಟಿಯಂತೆ ಕಾರ್ಪಸ್ ನಿಧಿ ನೀಡುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಬಂಡವಾಳ ಲೆಕ್ಕಶೀರ್ಷಿಕೆಯಲ್ಲಿ ವೆಚ್ಚವಾಗದೆ ಇರುವ ಲೆಕ್ಕ ಶೀರ್ಷಿಕೆ : 4225-01-190-0-06 ರಡಿ ಒಟ್ಟಾರೆ ರೂ.109.04 ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 19-08-2016 ರಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಕಲ್ಯಾಣಕ್ಕಾಗಿ ಯೋಜನೆಯಡಿ ಒದಗಿಸಿದ ಅನುದಾನದಲ್ಲಿ ಬಂಡವಾಳ ಲೆಕ್ಕಶೀರ್ಷಿಕೆಯಡಿ 2014-15ನೇ ಸಾಲಿನಲ್ಲಿ ಬಳಕೆಯಾಗದೇ ಇರುವ (Unspent amount) ಅನುದಾನದ ಲೆಕ್ಕ ಶೀರ್ಷಿಕೆ:4225-01-190-0-06 ರಡಿ ರೂ.109.04 ಕೋಟಿಗಳಲ್ಲಿ (ಕ್ರಮಸಂಖ್ಯೆ: (7) ರಲ್ಲಿ) ತಲಾ ರೂ.1.00 ಕೋಟಿಯಂತೆ ಒಟ್ಟಾರೆ ರೂ.3.00 ಕೋಟಿಗಳನ್ನು ಒದಗಿಸಲಾಗಿದೆ. ಸದರಿ ಮೂರು ವಿಶ್ವವಿದ್ಯಾನಿಲಯಗಳ ಉಪ ಕುಲಪತಿ / ನಿಬಂಧಕರು ಪ್ರತಿ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದಿಂದ ನಿಗದಿಯಾಗಿರುವ ರೂ.1.00 ಕೋಟಿ ಅನುದಾನದ ಜೊತೆಗೆ ವಿಶ್ವವಿದ್ಯಾಲಯದ ಅನುದಾನವನ್ನು ಸೇರಿಸಿ ಕಾರ್ಪಸ್ ನಿಧಿ ಸ್ಥಾಪಿಸಿ, ಸದರಿ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿಯಲ್ಲಿ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಿ, ನಿರ್ವಹಿಸುವ ಕುರಿತು ವಿವರವಾದ ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೋರಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಮೂರು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪನೆ ಮಾಡಲು ತಾತ್ವಿಕ ಮಂಜೂರಾತಿ ನೀಡಿ ಸರ್ಕಾರಿ ಆದೇಶ ಹೊರಡಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಕೋರಿದ್ದಾರೆ.

DR (PDI)

DV-7

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 528 ಪಕವಿ 2016, ಬೆಂಗಳೂರು, ದಿನಾಂಕ: 19-11-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ಪರಿಶಿಷ್ಟ ಕಲ್ಯಾಣ ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಬಿ.ಬಸವಲಿಂಗಪ್ಪ, ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಎನ್.ರಾಚಯ್ಯ ಮತ್ತು ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ ಪ್ರೊ॥ ಬಿ.ಕೃಷ್ಣಪ್ಪನವರ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ತಲಾ ರೂ.1.00 ಕೋಟಿ (ತಲಾ ರೂಪಾಯಿ ಒಂದು ಕೋಟಿಗಳು ಮಾತ್ರ) ಯಂತೆ ಕಾರ್ಪಸ್ ನಿಧಿ ಸ್ಥಾಪಿಸಿ, ಸದರಿ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿಯಲ್ಲಿ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲು ತಾತ್ವಿಕ ಮಂಜೂರಾತಿ ನೀಡಿ ಆದೇಶಿಸಿದೆ.

ಮೂರು ವಿಶ್ವವಿದ್ಯಾನಿಲಯಗಳ ಉಪ ಕುಲಪತಿ / ನಿಬಂಧಕರು ಪ್ರತಿ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದಿಂದ ನಿಗಧಿಯಾಗಿರುವ ರೂ.1.00 ಕೋಟಿ ಅನುದಾನದ ಜೊತೆಗೆ ವಿಶ್ವವಿದ್ಯಾಲಯದ ಅನುದಾನವನ್ನು ಸೇರಿಸಿ ಕಾರ್ಪಸ್ ನಿಧಿ ಸ್ಥಾಪಿಸಿ, ಸದರಿ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿಯಲ್ಲಿ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಿ, ನಿರ್ವಹಿಸುವ ಕುರಿತು ವಿವರವಾದ ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಂದಿಗೆ ಪಡೆದು, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಅನುದಾನ ಮಂಜೂರು ಮಾಡತಕ್ಕದ್ದು.

ಸದರಿ ಅನುದಾನವನ್ನು ಲೆಕ್ಕ ಶೀರ್ಷಿಕೆ : 4225-01-190-0-06 ರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2015 ದಿನಾಂಕ: 09-04-2015 ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
19/11/16
(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ),
ಸಮಾಜ ಕಲ್ಯಾಣ ಇಲಾಖೆ.

ಗೆ:

8. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
9. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
10. ಉಪ ಕುಲಪತಿ / ನಿಬಂಧಕರು, ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗ ವಿಶ್ವವಿದ್ಯಾನಿಲಯಗಳು.
11. ಜಿಲ್ಲಾಧಿಕಾರಿಗಳು, ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳು.

12. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳು.
13. ಜಂಟಿ/ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳು.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:

5. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
7. ಸರ್ಕಾರದ ಉಪ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕ, ವಿಕಾಸಸೌಧ.
8. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ 206, 2ನೇ ಮಹಡಿ, ವಿಧಾನಸೌಧ, ಬೆಂಗಳೂರು.

*********

ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

ಸಂ:ಡಿ7/394/2016-17

ದಿನಾಂಕ:29-12-2018

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು-560 001.

ಮಾನ್ಯರೆ,

ವಿಷಯ:ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ.ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತು-ಅಧಿನಿಯಮ ಅನುಮೋದನೆಗಾಗಿ.

ಉಲ್ಲೇಖ:1)ಸರ್ಕಾರಿ ಆದೇಶ ಸಂಖ್ಯೆ:ಸಕಇ,ಪಕವಿ 2016, ಬೆಂಗಳೂರು, ದಿನಾಂಕ 19-11-2016.
2)ಸರ್ಕಾರಿ ಆದೇಶ ಸಂಖ್ಯೆ:ಸಕನಿ/ಪಜಾಉಯೋ-2/ಸಿಆರ್-103, ದಿನಾಂಕ:07-11-2016.
3)ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಅವರ ಪತ್ರ ಸಂಖ್ಯೆ: ಸಕನಿ.ಮೂಸಾ-2/ವಿವಿ/ಸಿಆರ್-02/2016-17, ದಿ:17-07-2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಉಲ್ಲೇಖಿತ (1) ರ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ.ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲು ಆದೇಶಿಸಿ, ಉಲ್ಲೇಖಿತ (2) ರ ಪತ್ರದಲ್ಲಿ ಸೂಚಿಸಿರುವಂತೆ ದಿನಾಂಕ 31-01-2017 ರಂದು ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಪ್ರಸ್ತಾವನೆಗೆ ಉಲ್ಲೇಖಿತ (3) ರ ಪತ್ರದಲ್ಲಿ ಅನುಮೋದನೆಯನ್ನು ನೀಡಿ ದಿನಾಂಕ 17-07-2017 ರಂದು ರೂ.100.00 (ನೂರು ಲಕ್ಷ ರೂಪಾಯಿಗಳು ಮಾತ್ರ) ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಉಲ್ಲೇಖಿತ ಆದೇಶ ಹಾಗೂ ಪತ್ರದ ಪ್ರತಿಗಳನ್ನು ಅವಗಾಹನೆಗಾಗಿ ಲಗತ್ತಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾದ ರೂ.100.00 ಲಕ್ಷಗಳನ್ನು ಕಾರ್ಪಸ್ ನಿಧಿಯಾಗಿ ಇಡಲಾಗಿದ್ದು, ಅದರಿಂದ ಬರುವಂತಹ ವಾರ್ಷಿಕ ಬಡ್ಡಿಯಿಂದ ಪ್ರಸ್ತಾವನೆ ಅನುಮೋದಿಸಿರುವ ಉದ್ದೇಶಗಳಿಗಾಗಿ ಬಳಸಲಾಗುವುದನ್ನು ತಮ್ಮ ಅವಗಾಗಹನೆಗೆ ತರಲಾಗಿದೆ.

ಈ ರೀತಿಯಾಗಿ ಸರ್ಕಾರದ ನಿರ್ದೇಶನದಂತೆ ಶ್ರೀ.ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲು ಉದ್ದೇಶಿಲಾಗಿದ್ದು, ಅಧ್ಯಯನ ಪೀಠದ ಉದ್ದೇಶಗಳನ್ನು ಈಡೇರಿಸುವ ಹಾಗೂ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಕರಡು ಅಧಿನಿಯಮವನ್ನು ಸಿದ್ಧಪಡಿಸಲಾಗಿರುವುದಕ್ಕೆ ದಿನಾಂಕ 05-11-2018 ರಂದು ಸಿಂಡಿಕೇಟ್ ಸಭೆಯ, ದಿನಾಂಕ 15-09-2018 ರಂದು ಶೈಕ್ಷಣಿಕ ಮಂಡಳಿಯ ಸಭೆಯ ಹಾಗೂ ದಿನಾಂಕ 29-10-2018 ರಂದು ಹಣಕಾಸು ಸಮಿತಿಯ ಅನುಮೋದನೆಯನ್ನು ನೀಡಲಾಗಿರುವ ಪ್ರತಿಯನ್ನು ಹಾಗೂ ಕರಡು ಅಧಿನಿಯಮದ 03 ಪ್ರತಿಗಳನ್ನು ಈ ಪತ್ರದ ಜೊತೆಯಲ್ಲಿ ಲಗತ್ತಿಸಲಾಗಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 41 (6) ರ ಪ್ರಕಾರ ಮೇಲ್ಕಂಡ ಕರಡು ಅಧಿನಿಯಮಕ್ಕೆ ಸನ್ಮಾನ್ಯ ಕುಲಾಧಿಪತಿಯವರ ಅಂಕಿತ ದೊರಕಿಸಿಕೊಡಲು ಕೋರಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ

ಕುಲಸಚಿವ 29/12/18

ಪ್ರತಿ:

1. ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕಛೇರಿ ಪ್ರತಿ.

(11)

<u>ಕರ್ನಾಟಕ ಸರ್ಕಾರ</u>

ಅನುಬಂಧ '೨'

ಸಂಖ್ಯೆ: ಇಡಿ 01 ಯುಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:21-02-2019.

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು -560 001.

ಇವರಿಗೆ:
ಕುಲಸಚಿವರು,
ಮೈಸೂರು ವಿಶ್ವವಿದ್ಯಾಲಯ
ಮೈಸೂರು-570 005.

Registrar Personal Section, University of Mysore

ಮಾನ್ಯರೇ,

ವಿಷಯ: ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್. ರಾಚಯ್ಯ ರವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತ ಪರಿನಿಯಮಾವಳಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಡಿವಿ7/394/2016-17 ದಿನಾಂಕ: 29.12.2018.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪರಿನಿಯಮಾವಳಿಗಳಿಗೆ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡ ಅಂಶಗಳಿಗೆ ಮಾಹಿತಿ ಒದಗಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

೧) ಪ್ರಸ್ತಾವನೆಯಲ್ಲಿನ ಉಲ್ಲೇಖದಲ್ಲಿ ತಿಳಿಸಿರುವ ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ಆದೇಶಗಳು/ಪತ್ರಗಳನ್ನು ಲಗತ್ತಿಸಿ ಕಳುಹಿಸುವುದು.

೨) ಕರಡು ಪರಿನಿಯಮಾವಳಿಗಳಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆ, ಶೈಕ್ಷಣಿಕ ಮಂಡಳಿ ಸಭೆ ಮತ್ತು ಹಣಕಾಸು ಸಮಿತಿಯು ಅನುಮೋದನೆ ನೀಡಿರುವ ಪ್ರತಿಗಳನ್ನು ಒದಗಿಸುವುದು.

೩) ಕರಡು ಪರಿನಿಯಮಾವಳಿಯನ್ನು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕುಲಸಚಿವರ ಸಹಿಯೊಂದಿಗೆ ಮೂರು ಪ್ರತಿಗಳನ್ನು ಕಳುಹಿಸುವುದು.

ತಮ್ಮ ನಂಬುಗೆಯ,

(ಎನ್ ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

DV7
08-3-19
6/3/19

ತಂತಿ ವಿಳಾಸ : ಯೂನಿರೇಕ್
ದೂರವಾಣಿ ಸಂಖ್ಯೆ : 2419577/2419331
ಫ್ಯಾಕ್ಸ್ : 0821-2419363/2419301

e-mail : registar@uni-mysore.ac.in
www.uni.-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

Estd. 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 406
ಮೈಸೂರು – 570 005

ದಿನಾಂಕ: 11 -09-2020

ಸಂ:ಡಿವಿ7/394/2016-17

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು-560 001

ಮಾನ್ಯರೆ,

ವಿಷಯ:ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ.ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತು-ಅಧಿನಿಯಮ ಅನುಮೋದನೆಗಾಗಿ.

ಉಲ್ಲೇಖ:1)ಸರ್ಕಾರಿ ಆದೇಶ ಸಂಖ್ಯೆ:ಸಕಇ/ಪಕವಿ 2016, ಬೆಂಗಳೂರು, ದಿನಾಂಕ 19-11-2016.
2)ಸರ್ಕಾರಿ ಆದೇಶ ಸಂಖ್ಯೆ:ಸಕನಿ/ಪಜಾಉಯೋ-2/ಸಿಆರ್-103, ದಿನಾಂಕ:07-11-2016.
3)ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಅವರ ಪತ್ರ ಸಂಖ್ಯೆ: ಸಕನಿ.ಮೂಸಾ-2/ವಿವಿ/ಸಿಆರ್-02/2016-17, ದಿ:17-07-2017.
4)ದಿನಾಂಕ 15-09-2018 ರಂದು ನಡೆದ ಶೈಕ್ಷಣಿಕ ಮಂಡಳಿಯ ಸಭೆಯ ನಡಾವಳಿ.
5)ದಿನಾಂಕ 05-10-2018 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
6)ದಿನಾಂಕ 29-10-2018 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿ.
7)ಸರ್ಕಾರಿ ಆದೇಶ ಸಂಖ್ಯೆ:ಇಡಿ-01/ಯುಎಂಎಸ್/2019/ದಿ:21-02-2019.
8)ಈ ಕಛೇರಿ ಇದೇ ಸಮ ಸಂಖ್ಯೆ ಪತ್ರ ದಿನಾಂಕ:29-12-2018.
9)ನಿಮ್ಮ ಪತ್ರ ಸಂಖ್ಯೆ ಇಡಿ35/ಯುಎಂವಿ/2020, ದಿನಾಂಕ:16-07-2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (9) ರ ತಮ್ಮ ಪತ್ರದಲ್ಲಿ ಶ್ರೀ.ಎನ್.ರಾಚಯ್ಯ ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಕ್ರಿಯಾ ಯೋಜನೆ ಸಲ್ಲಿಸಲು ಸೂಚಿಸಿರುವಂತೆ ಈ ಪತ್ರದೊಡನೆ ಕ್ರಿಯಾಯೋಜನೆಯನ್ನು ತಮ್ಮ ಅವಗಾಹನೆಗೆ ಲಗತ್ತಿಸುತ್ತಾ, ಈಗಾಗಲೇ ಸಲ್ಲಿಸಲಾಗಿರುವ ಕರಡು ಅಧಿನಿಯಮಕ್ಕೆ ಸನ್ಮಾನ್ಯ ಕುಲಾಧಿಪತಿಗಳ ಅಂಕಿತ ದೊರಕಿಸಿಕೊಡಲು ಮತ್ತೊಮ್ಮೆ ಕೋರಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ

ಕುಲಸಚಿವ

ಪ್ರತಿ:

1. ಅಧ್ಯಕ್ಷರು. ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕಛೇರಿ ಪ್ರತಿ.

ಅಡಕ 'ಉ'

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 35 ಯುಎಂವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 26.11.2020.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

ಇವರಿಗೆ,
ಕುಲಸಚಿವರು,
ಮೈಸೂರು ವಿಶ್ವವಿದ್ಯಾಲಯ,
ಮೈಸೂರು-570 006.

ಮಾನ್ಯರೇ,

ವಿಷಯ: ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತ ಪರಿನಿಯಮಾವಳಿಗೆ ಅನುಮೋದನೆ ನೀಡುವ ಬಗ್ಗೆ

ಉಲ್ಲೇಖ: ತಮ್ಮ ಕಛೇರಿ ಪತ್ರ ಸಂ: ಡಿವಿ7/394/2016-17, ದಿನಾಂಕ: 30.05.2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರವನ್ನು ಮರು ಪರಿಶೀಲಿಸಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸಲು ಉದ್ದೇಶಿಸಿರುವ ಪರಿನಿಯಮವನ್ನು ಯುಜಿಸಿ ರೂಪಿಸಿಕೊಂಡ ಮಾದರಿಯಲ್ಲಿಯೇ ಶಿಸ್ತು ಬದ್ಧವಾಗಿ ಮತ್ತು ಕಾಲಮಿತಿಯಲ್ಲಿ ಅಧ್ಯಯನ ಪೀಠದ ಕೆಲಸವನ್ನು ಮುಕ್ತಾಯಗೊಳಿಸಲು ಅನುವಾಗುವಂತೆ ಈ ಕೆಳಗೆ ವಿವರಿಸಿದ ಲೋಪದೋಷಗಳನ್ನು ಸರಿಪಡಿಸಿಕೊಂಡು, ಯುಜಿಸಿಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕರಡು ಪರಿನಿಯಮಗಳನ್ನು ಸಿದ್ದಪಡಿಸಿ ಸಲ್ಲಿಸಿದಲ್ಲಿ ಪರಿಶೀಲಿಸಲಾಗುವುದೆಂದು ತಿಳಿಸುತ್ತಾ, ಉಲ್ಲೇಖಿತ ಪ್ರಸ್ತಾವನೆಯನ್ನು ಅನುಮೋದನೆ ರಹಿತವಾಗಿ ಹಿಂದಿರುಗಿಸಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

1. ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಸಲ್ಲಿಸಿರುವ ಶ್ರೀ ಎನ್ ರಾಚಯ್ಯ ಅಧ್ಯಯನ ಪೀಠದ ಕರಡನ್ನು ಯುಜಿಸಿಯು ಅನುದಾನ ನೀಡಿ ಸ್ಥಾಪಿಸುವಾಗ ವಿಧಿಸುವ ಷರತ್ತುಗಳಿಗೆ ಸ್ಥೂಲವಾಗಿ ಹೋಲಿಸಿದಲ್ಲಿ ಹಲವಾರು ಅಂಶಗಳನ್ನು ಒಳಗೊಂಡಿರುವುದಿಲ್ಲ.
2. ವಿಶ್ವವಿದ್ಯಾನಿಲಯವು ಶ್ರೀ ಎನ್.ರಾಚಯ್ಯ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತಾದ ಕರಡು ಪರಿನಿಯಮದಲ್ಲಿ ಹೆಚ್ಚಿನ ಭಾಗವನ್ನು ಅನುದಾನ ಖರ್ಚು ಮಾಡುವ ಬಗ್ಗೆಯೇ ಕೇಂದ್ರೀಕರಿಸಿದ್ದು, ಅಧ್ಯಯನ ಪೀಠದ ಅವಧಿಯ ಬಗ್ಗೆ ಪ್ರಸ್ತಾಪವಿರುವುದಿಲ್ಲ.

DV-7
3/12/2020

Registrar Personal Section
809
Dt. 3/12/2020

3. ಸದರಿ ಪರಿನಿಯಮದಲ್ಲಿ ಹೊಣೆಗಾರಿಕೆಯನ್ನು ನಿಗಧಿಪಡಿಸಿಕೊಂಡಿರುವುದಿಲ್ಲ. ಅ[illegible] / ವಾರ್ಷಿಕ ಪುರಾವಲೋಕನ, ಅಂತಿಮ ವರದಿ ಸಲ್ಲಿಕೆ, ಅಧ್ಯಯನ - ಪೀಠದ ಫಲಿತಾಂಶ, ಪೀಠದ ಕಾರ್ಯ ವೈಖರಿ ಮತ್ತು ಸಾಧನೆಗಳ ಬಗ್ಗೆ ಸರ್ಕಾರದಿಂದ ಪುನರಾವಲೋಕನ ಮಾಡುವ ಅಧಿಕಾರ, ಪೀಠದ ಮುಖ್ಯಸ್ಥರಿಗೆ ಇರಬೇಕಾದ ಅರ್ಹತೆ, ಪೀಠದ ಅವಧಿಯು ಮುಕ್ತಾಯವಾದ ನಂತರ ಕಾರ್ಪಸ್ ನಿಧಿಯನ್ನು ಏನು ಮಾಡಬೇಕು, ಇಡಿ ಅಧ್ಯಯನ ಪೀಠದ ಕೆಲಸದ ಬಗ್ಗೆ ಸಾರ್ವಜನಿಕರು / ಅಧ್ಯಯನಾಸಕ್ತರು ಯಾವ [illegible] ಮಾಹಿತಿ ಪಡೆಯಬಹುದು ಎಂಬ ಬಗ್ಗೆ ಯಾವುದೇ ಉಲ್ಲೇಖವು ಕರಡು ಪರಿನಿಯಮದಲ್ಲಿ ಇರುವುದಿಲ್ಲ.

ತಮ್ಮ ನಂಬುಗೆಯ,

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಅನುಬಂಧ 'ಊ'

UNIVERSITY OF MYSORE

**Statutes relating to the Establishment of Chair in the Name of Sri. N. RACHAYYA in the Department of Studies in Political Science, University of Mysore, Mysuru**

**Preamble:**

Sri.N.Rachayya a man of social commitment and political legacy was born on 8th of May 1920 at Keetanahalli, T.Narasipura Taluk, Mysore District. He did his early education in his village, Bachelor's degree in Maharaja's College, Mysuru and later on completed Law in Bangalore Law College, Bengaluru.

He began his political career by being elected as a Member of Mysore City Council. He was the first leader of depressed classes in the history of Mysuru City Council and he also became the Vice-President of Municipal Council of Mysore City during 1949-52.

In the first general election held during 1952, he became the Member of Lokasabha and later elected to the Parliamentary Executive Committee.

During 1973 in the Cabinet of Sri.Devaraja Urs, held several posts and rose to become a great leader. He served the cause of Dalits and Backward communities and also worked for the betterment of the country both at the State and National levels. He pioneered the "Karnataka Swabhimani Dalit Movement".

In recognition of the yeomen service rendered by Sri.N.Rachayya, the State Government has sanctioned an amount of Rs.1.00 Crore vide letter No: ಸಕಇ 528.ಪಕವಿ **2016**, Bangalore, Dated 19-11-2016 to institute the Chair in his name in the University of Mysore by keeping that amount as corpus fund and to utilize the interest accrued there on for the purposes of research and organising academic activities on his life and contribution to the Society.

To facilitate the above, in exercising the powers conferred under Section 40 (F) (i) read with Section 29(2)(T) and 41 of Karnataka State Universities Act, 2000, the Syndicate frames the following Statutes.

**The Statutes governing the establishment of Sri.N.Rachayya Study Chair in the University of Mysore-2019.**

**I. Title:**

These Statutes shall be called "The Statutes governing the establishment of Sri.N.Rachayya Study Chair in the University of Mysore-2019.

**II. Commencement:**

These Statutes shall come into force from the date of the assent by the Honorable Chancellor. However, in accordance with these statutes the activities already started/carried out with effect from the date of release of grants by the State Government shall also be considered as parts of activities of this Chair. The Chair shall conduct activities as per the State Government Order vide No: FD 02 TFP 2015, Dated 09-04-2015.

**III. Place:**

Sri.N.Rachayya Study Chair shall operate in the Department of Studies in Political Science, Manasagangothri, Mysuru.

**IV. Aims and Objectives of the Chair:**

The Chair shall pursue the following objectives and programmes.

a. To appraise the Political leadership of Sri N. Rachayya and his contemporary leaders at State and National levels.
b. To study his contribution to the parliamentary democracy as the member of the Parliament, Minister, MLA and MLC in the State of Karnataka.

c. To analyze Sri.N.Rachayya's contribution in strengthening the Dalits Political leadership in the State of Karnataka.
d. To compile the contribution of Sri.N.Rachayya to social cause and political empowerment of Dalits.
e. To identify the Socio-economic ideological dimensions of political career of Sri.N. Rachayya.
f. To carry out studies, research, extension and publications about the life, achievements and contributions of Sri.N.Rachayya, to conduct seminars/conferences/symposia.
g. To conduct any other activities relevant to political, social and economic empowerment of Dalits, backward and neglected and marginalized communities.

**V. Staff Requirements:**

The Chair shall function under the supervision of the Departmental Council and the Chairman of the Department. No separate administrative staff shall be appointed for the Chair except the Visiting Professor. However, the University shall depute/provide administrative assistance to the Chair on need basis.

**VI. Visiting Professor-01:**

a. The Chairman of the Department shall in consultation with the Department Council to prepare a panel of three eminent/experts and send the panel to the University. The University shall invite one of these three to serve the Chair as the Visiting Professor by the Syndicate for a period of one year. However, the University may extend his /her services for one more year depending upon the requirement.

b. Visiting Professor shall be paid a monthly honorarium of Rs.15,000/- and shall also be eligible for free accommodation at the University Guest House during their work period.

c. The honorarium shall be enhanced with the approval of Syndicate from time to time subject to availability of funds.

**VII. Responsibilities of the Chair:** The Visiting Professor shall deliver a lecture in a Month and engage in planning and executing projects/activities under the Chair in consultation with the Chairman of the Department.

**VIII. Financial Implications:**

The Government of Karnataka has earmarked a sum of Rs.1,00,00,000/- (One Crore) for the purpose of Instituting Sri.N. RACHAYYA Chair. The University shall create a corpus of this amount, institute the chair and meet the operational expenses from out of the interest accrued on the capital endowment of Rs.1.00 Crore. The following shall be the pattern of expenditure for the initial years.

| | | |
|---|---|---|
| a) | Honorarium to Visiting Professor Rs.15,000/- per Month | Rs.1,80,000/- |
| b) | Contingency (Printing & Publishing, Stationery, Books, Incidental and other expenses) | Rs. 1,00,000/- |
| c) | Organizing Seminar/Conference/workshop | Rs.1,00,000/- |
| d) | 1. Appointment of One Research Assistant for a maximum period of One Year on temporary basis with a consolidated salary of Rs.8,000/- per month<br>2. Appointment of One Field Assistant for a maximum period of six months on temporary basis with a consolidated salary of Rs.6,000/- per month excluding TA/DA. | For periods as required subject to availability of funds |

Out of the total interest accrued 20% shall be added to the Corpus fund annually and the remaining shall be utilized for the activities of the Chair. Any amount unspent in a given year shall also be added to the corpus. Further, any additional funds raised from any source, except for the funds for specific project/programme purposes, shall be added to the corpus.

**IX. Saving Clause:** If there are any difficulties in interpreting the provisions of this statutes, the Vice-Chancellor, with the approval of the Syndicate shall provide necessary clarifications and take suitable decisions.

**X. Accountability of the Chair:**

a) The Study Chair shall work within a time frame and any important work or assignment to be taken up shall get the approval of the University.

b) Power to review the Chair's work annually, the final report, results of the Study Chair's performance, the Chair's style of functioning and achievements and also guidance for further growth of the Chair is vested with the University and the Government of Karnataka.

c) In the event of the Chair's failure in realising its objectives, the Government can take action based on the report submitted by the University.

*****

Subject No. 11.3

Patent Commercialized ಆಗಿರುವ ಸಂಬಂಧ ಬಿಡುಗಡೆಯಾಗಿರುವ Royalty ಮೊತ್ತವನ್ನು Inventors ರವರಿಗೆ ನೀಡುವ ಬಗ್ಗೆ.

*****

ಸಂಯೋಜಕರು, ಭೌದ್ಧಿಕ ಆಸ್ತಿ ಹಕ್ಕುಗಳ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:06-03-2023 ರಂದು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದುಕೊಂಡು ಡಾ.ಕೆ.ಎಸ್.ರಂಗಪ್ಪ, ಡಿಸ್ಟಿಂಗ್ವಿಷ್ಡ್ ಪ್ರೊಫೆಸರ್ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಡಾ.ಸಿ.ಡಿ.ಮೋಹನ್, ಅಣುಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಡಾ.ಶೋಭಿತ್ ರಂಗಪ್ಪ ಇವರುಗಳು ಕೈಗೊಂಡಿದ್ದ **Compuounds useful in inhibiting human trefoil factor3** ಮತ್ತು **Small molecule inhibitors of BCL-2-associated death promoter (BAD) phosphorylation** ಸಂಶೋಧನೆಗೆ ಸಂಬಂಧಿಸಿದಂತೆ Patent ಪಡೆಯುವ ಸಂಬಂಧ ಸಲ್ಲಿಸಿದ್ದ ಅರ್ಜಿಗಳಿಗೆ National University of Singapore ಇವರು Patent Commercialized ಆಗಿರುವ ಹಿನ್ನೆಲೆಯಲ್ಲಿ Royalty ಮೊತ್ತವಾಗಿ ರೂ.5,10,330.39 ಗಳನ್ನು ಮೊದಲ ಕಂತಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಬಿಡುಗಡೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಸದರಿ ಮೊತ್ತದಲ್ಲಿ ಶೇ.10 ರಷ್ಟನ್ನು ವಿಶ್ವವಿದ್ಯಾನಿಲಯದ ಮೇಲ್ಪರ್ಚಾಗಿ ಉಳಿಸಿಕೊಂಡು ಉಳಿದ ಶೇ.90 ರಷ್ಟನ್ನು Patent Inventors ರವರುಗಳಿಗೆ ಹಂಚಿಕೆ ಮಾಡುವ ಸಂಬಂಧ ದಿನಾಂಕ:26-04-2023 ರಂದು ಮಧ್ಯಾಹ್ನ 12.30 ಗಂಟೆಗೆ ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಭೌದ್ಧಿಕ ಆಸ್ತಿ ಹಕ್ಕುಗಳ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಈ ಕೆಳಗಿನಂತೆ* ತೀರ್ಮಾನಿಸಲಾಗಿರುತ್ತದೆ.

